ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1106(1433)
ಸದಸ್ಯರ ಹೆಸರು : ಶ್ರೀ ದಿನೇಶ್ ಗುಂಡೂರಾವ್ (ಗಾಂಧೀನಗರ)
ಉತ್ತರಿಸುವ ಸಚಿವರು : ಶ್ರೀ ಹೆಚ್.ಡಿ.ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಬೆಂಗಳೂರು ನಗರದ ಕೊಳಚೆ ಪ್ರದೇಶದ ಬಡವರ ವಿದ್ಯುತ್ ಬಿಲ್ಲಿನ ಬಾಕಿ ಹಣವನ್ನು ತಡೆಹಿಡಿದು 1-4-2006 ರಿಂದ ಮುಂದಕ್ಕೆ ಬಿಲ್ಲಿನ ನಿಗದಿತ ಹಣ ಪಡೆಯಲು ಆದೇಶಿಸಿರುವುದು ನಿಜವೆ;

ಹೌದು. ಬೆಂಗಳೂರು ನಗರದ ಕೊಳಚೆ ಪ್ರದೇಶದ ಪ್ರತಿ ಗೃಹ ಬಳಕೆಯ ಸ್ಥಾವರಗಳ ಲೆಕ್ಕದಲ್ಲಿರುವ ಬಾಕಿಯನ್ನು (1-4-2006 ರಲ್ಲಿದ್ದಂತೆ) ಪ್ರತ್ಯೇಕವಾಗಿ ಉಳಿಸಿಕೊಂಡು 1-4-2006 ರಿಂದ ಮುಂದಿನ ಬಿಲ್ಲಿನ ಹಣವನ್ನು ಮಾತ್ರ ಪಡೆಯಲು ಆದೇಶ ನೀಡಲಾಗಿದೆ.

ಆ) ಹಾಗಿದ್ದಲ್ಲಿ, ಬೆಸ್ಕಾಂನ ಎಲ್ಲಾ ಕೌಂಟರ್‌ಗಳಲ್ಲಿಯೂ ಈ ರೀತಿ ಹಣ ಸ್ವೀಕರಿಸದಿರಲು ಕಾರಣವೇನು;

ಕೊಳಚೆ ಪ್ರದೇಶದ ನಿವಾಸಿಗಳಿಂದ ಏಪ್ರಿಲ್-06ರ ನಂತರದ ಮಾಸಿಕ ಬಿಲ್‌ಗಳನ್ನು ಮಾನ್ಯ ಮಾಡಿಕೊಂಡು ಹಣಪಾವತಿಯನ್ನು ಸ್ವೀಕರಿಸಲು ಸಂಬಂಧಿಸಿದ ಎಲ್ಲಾ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ.

ಇ) ದಿನಾಂಕ 1-4-2006ರ ನಂತರದ ಹಣ ಪಾವತಿಸಿದ್ದಾಗ್ಯೂ ಅದಕ್ಕಿಂತ ಹಿಂದಿನ ಬಾಕಿ ಪುನಃ ಬಿಲ್ಲಿನಲ್ಲಿ ನಮೂದಾಗುತ್ತಿದ್ದು, ಅದಕ್ಕೆ ಬಡ್ಡಿ ವಿಧಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಈ) ಹಾಗಿದ್ದಲ್ಲಿ, ಈ ಎಲ್ಲಾ ಗೊಂದಲಗಳಿಗೆ ತೆರೆ ಎಳೆದು ನಗರ ಪ್ರದೇಶದ ಎಲ್ಲಾ ಬಡವರ ಬಿಲ್ಲಿನ ಬಾಕಿ ಹಣದ ಮೇಲಿನ ಬಡ್ಡಿ ಮನ್ನಾ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೆ;

ಬೆಸ್ಕಾಂನಲ್ಲಿ ಬಿಲ್‌ಗಳಿಗೆ ಸಂಬಂಧಿಸಿದ ತಂತ್ರಾಂಶದಲ್ಲಿ ವಿದ್ಯುತ್ ಬಾಕಿ ಮತ್ತು ಬಡ್ಡಿಯನ್ನು ನಮೂದಿಸದೆ ಬಿಲ್ ನೀಡುವ ಸೌಲಭ್ಯವಿರುವುದಿಲ್ಲ. ಅಲ್ಲದೆ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗದ ನಿಯಮಗಳ ಪ್ರಕಾರ ವಿದ್ಯುತ್ ಬಿಲ್ಲಿನಲ್ಲಿ ಬಾಕಿ ಮೊತ್ತವನ್ನು ಸತತವಾಗಿ ತೋರಿಸದೆ ಇದ್ದಲ್ಲಿ 2 ವರ್ಷಗಳ ನಂತರ ಆ ಬಾಕಿಯನ್ನು ವಸೂಲಿ ಮಾಡಲು ಅವಕಾಶವಿರುವುದಿಲ್ಲ. ಆದಾಗ್ಯೂ ಬೆಂಗಳೂರು ನಗರದ ಕೊಳಚೆ ಪ್ರದೇಶದ ಬಡವರ ವಿದ್ಯುತ್ ಬಿಲ್ಲಿನ ಬಡ್ಡಿಯನ್ನು ಮನ್ನಾ ಮಾಡುವ ಬಗ್ಗೆ ಸರ್ಕಾರವು ಪರಿಶೀಲಿಸುತ್ತಿದೆ.